ದಿನಾಂಕ 28-04-2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು 1ನೇ ಪ್ರತಿವಾದಿಯ ವಾರಸುದಾರರು ಮತ್ತು 2ನೇ ಪ್ರತಿವಾದಿ ಪರ ಶ್ರೀ ಕೆ.ಬಿ.ಏ., ವಕೀಲರಿಂದಃ-

5. ನನ್ನ ಅಣ್ಣ ಮತ್ತು ಅಕ್ಕ ನಮಗೆ ಕೇಸು ಬೇಡ, ನೀನೇ ನಡೆಸಿಕೋ ಎಂದು ಹೇಳಿದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ನನ್ನ ಅಣ್ಣ ಮಲ್ಲಯ್ಯ ಕೆಂಗೇರಿ ಹೋಬಳಿ, ಕೋಡಿಪಾಳ್ಯದಲ್ಲಿ ವಾಸ ಎಂದರೆ ಸರಿ. ಅವರು ಈ ಕೇಸಿನಲ್ಲಿ ಪಾರ್ಟಿ ಅಲ್ಲ. ನಿಮ್ಮ ಅಣ್ಣನಿಗೆ ನಿಮ್ಮ ತಾಯಿ ಏಕೆ ಪವರ್ ಆಫ್ ಅಟಾರ್ನಿ ಕೊಟ್ಟಿಲ್ಲ ಎಂದರೆ ಸಾಕ್ಷಿಯು ಅವರು ಬೇರೆ ಊರಿನಲ್ಲಿದ್ದಾರೆ ಎಂದು ನುಡಿಯುತ್ತಾರೆ. ನಮ್ಮ ತಾಯಿಗೆ ಈಗ ಅಂದಾಜು 90 ವರ್ಷ ವಯಸ್ಸು ಆಗಿದೆ. ನಿಮ್ಮ ತಾಯಿಗೆ ಸರಿಯಾಗಿ ಕಿವಿ ಕೇಳಿಸುವುದಿಲ್ಲ, ಕಣ್ಣು ಕಾಣಿಸುವುದಿಲ್ಲ ಎಂದರೆ ಸಾಕ್ಷಿಯು ಸ್ವಲ್ಪ ಕಿವಿ ಕೇಳಿಸುತ್ತದೆ, ಮನೆ ಬಿಟ್ಟು ಎಲ್ಲಿಯೂ ಹೋಗುವುದಿಲ್ಲ ಎಂದು ನುಡಿಯುತ್ತಾರೆ. ನಮ್ಮ ತಾಯಿಯನ್ನು ಎಲ್ಲಿಗಾದರೂ ಕರೆದುಕೊಂಡು ಹೋದರೆ ನಾವೇ ಆಟೋ ಮಾಡಿ ಕರೆದುಕೊಂಡು ಹೋಗಬೇಕು. ನಮ್ಮ ತಾಯಿಗೆ ಯಾವುದೇ ವ್ಯವಹಾರ ಮಾಡುವ ಚೈತನ್ಯ ಇಲ್ಲ.

6. ಪವರ್ ಆಫ್ ಅಟಾರ್ನಿಯನ್ನು ನನ್ನ ತಾಯಿ ಮತ್ತು ಚಿಕ್ಕಬೈರಕ್ಕನ ಮಕ್ಕಳು ಸೇರಿ ಕೊಟ್ಟರು. ನಿಮ್ಮ ತಾಯಿ ಪವರ್ ಆಫ್ ಅಟಾರ್ನಿ ಕೊಡುವ ದಿವಸ ಬಂದಿಲ್ಲ ಎಂದರೆ ಸಾಕ್ಷಿಯು ನನ್ನ ತಾಯಿ ನನಗೆ ಬರೆದುಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಪವರ್ ಆಫ್ ಅಟಾರ್ನಿಯನ್ನು ನನ್ನ ತಾಯಿ ಯಾವ ತಾರೀಖು ಬರೆದುಕೊಟ್ಟರು ಎಂದು ಈಗ ಹೇಳಲು ಆಗುವುದಿಲ್ಲ. ನಿಪಿ-1ರಲ್ಲಿ

ಏನು ಬರೆದಿದೆ ಎಂದು ನನ್ನ ತಾಯಿಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಮೊದಲ ಬಾರಿ ಕೊಟ್ಟ ಪವರ್ ಆಫ್ ಅಟಾರ್ನಿಯನ್ನು ನನ್ನ ತಾಯಿಯೇ ಹೇಳಿ ಬರೆಸಿದ್ದು. ಈ ಕೇಸಿನ ವ್ಯವಹಾರ ನನ್ನ ತಾಯಿಗೆ ಏನೂ ಗೊತ್ತಿಲ್ಲ, ಪ್ರತಿವಾದಿ 1 ಮತ್ತು 2ರವರಿಗೆ ತೊಂದರೆ ಕೊಡಬೇಕೆಂದು, ಅವರಿಂದ ಅಕ್ರಮ ಲಾಭ ಪಡೆಯಬೇಕೆಂದು ಕೇಸನ್ನು ನಾನೇ ನಡೆಸುತ್ತೇನೆ ಎಂದು ನಿಪಿ-1ನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

7. ತಿಮ್ಮಯ್ಯ ಉರುಫ್ ಗುಡುಗಪ್ಪನವರು ಹಾಗೂ ಸಿದ್ದಮ್ಮನವರು ಮದುವೆಯಾದಾಗಿನಿಂದ ಅವರ ತಂದೆಯ ಮನೆಯಲ್ಲಿ ವಾಸ ಎಂದರೆ ಸಾಕ್ಷಿಯು ಗಂಡನ ಮನೆಯಲ್ಲೇ ಇದ್ದರು, ಮಕ್ಕಳ ಮದುವೆಯಾದ ಮೇಲೆ ತಂದೆಯ ಮನೆಗೆ ಬಂದರು ಎಂದು ನುಡಿಯುತ್ತಾರೆ. ಸಿದ್ದಮ್ಮನ ಮದುವೆಯಾಗಿ ಎಷ್ಟು ವರ್ಷಗಳಾಗಿವೆ ಎಂದರೆ ಸಾಕ್ಷಿಯು ನಾನು ಹುಟ್ಟು ಮೊದಲೇ ಆಗಿತ್ತು, ನನ್ನ ತಾಯಿಯನ್ನು ಕೇಳಬೇಕು ಎಂದು ನುಡಿಯುತ್ತಾರೆ. ಬುಡ್ಡಕೆಂಪಯ್ಯನ ಹೆಣ್ಣು ಮಕ್ಕಳ ಮದುವೆಯಾಗುವಾಗ ನಾನು ಹುಟ್ಟಿರಲಿಲ್ಲ. ಸಿದ್ದಮ್ಮ ಮದುವೆಯಾದ ನಂತರ ಗಂಡನ ಮನೆಯಲ್ಲಿ ವಾಸವಿದ್ದರು ಎಂದು ತೋರಿಸಲು ದಾಖಲೆ ಇಲ್ಲ ಎಂದರೆ ಸಾಕ್ಷಿಯು ನನ್ನ ಬಳಿ ಇಲ್ಲ ಎಂದು ನುಡಿಯುತ್ತಾರೆ. ಸಿದ್ದಮ್ಮ ಮತ್ತು ತಿಮ್ಮಯ್ಯ ಸಾಯುವತನಕ ಬುಡ್ಡಕೆಂಪಯ್ಯನ ಮನೆಯಲ್ಲೇ ಇದ್ದರು ಎಂದರೆ ಸರಿ.

8. ತಿಮ್ಮಯ್ಯನ ತಂದೆಯ ಹೆಸರು ತಿಮ್ಮರಾಯಪ್ಪ ಎಂದರೆ ಸರಿ. ತಿಮ್ಮಯ್ಯ ಉರುಫ್ ಗುಡುಗಯ್ಯ ತಿಮ್ಮರಾಯಪ್ಪನ ತಮ್ಮ ಎಂದರೆ ಸರಿ. ತಿಮ್ಮರಾಯಪ್ಪನ ತಂದೆಯ ಹೆಸರು ವೆಂಕಟಪ್ಪ ಎಂದರೆ ಸರಿ. ತಿಮ್ಮರಾಯಪ್ಪ

ಅವರ ತಂದೆಯ ಆಸ್ತಿಯಲ್ಲಿ ಒಬ್ಬರೇ ಇದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ದೊಡ್ಡಪ್ಪನಿಗೂ ಭಾಗ ಕೊಟ್ಟಿದ್ದರು ಎಂದು ನುಡಿಯುತ್ತಾರೆ. ತಿಮ್ಮರಾಯಪ್ಪನ ಮರಣಾ ನಂತರ ತಿಮ್ಮರಾಯಪ್ಪನ ತಂದೆಯ ಆಸ್ತಿಗಳನ್ನು ಅವರ ಮಕ್ಕಳಾದ ತಿಮ್ಮಯ್ಯ, ಗೋವಿಂದಯ್ಯ, ಶ್ರೀನಿವಾಸಯ್ಯ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಕೊಂಡುಕೊಂಡು ಭಾಗ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ತಿಮ್ಮಯ್ಯ ಉರುಫ್ ಗುಡುಗಯ್ಯನಿಗೆ ಅವರ ತಂದೆಯ ಆಸ್ತಿಗಳು ಅಂದರೆ ಜಮೀನು, ಮನೆ ಭಾಗ ಬಂದಿಲ್ಲ ಎಂದರೆ ಸಾಕ್ಷಿಯು ಎಲ್ಲಾ ಭಾಗ ತೆಗೆದುಕೊಂಡಿದ್ದಾರೆ, ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ಶ್ರೀ ಕೆ.ಬಿ.ವಿ., ವಕೀಲರು ನ್ಯಾಯಾಲಯ ಸೂಕ್ತ ವಿವಾದಾಂಶ ರಚಿಸಿರುವುದಿಲ್ಲ ಎಂದು ವಾದಿಸಿರುತ್ತಾರೆ, ಈ ಸಂಬಂಧ ಅರ್ಜಿ ಸಲ್ಲಿಸಲು ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.